# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/19/2015 16 ದಿನಾಂಕ:05 .05.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

**ವಾದಿ (ಶ್ರೀ/ಶ್ರೀಮತಿ)**

1) ವಿ.ಎಂ. ನಾಗಪ್ಪ 2) ಲಿಂಗಪ್ಪ ತಂದೆ ಲೇಟ್ ಹಾವಪ್ಪ ವಾಸ ವರದಾಪುರ ಗ್ರಾಮ ಹಬೊಹಳ್ಳಿ ತಾಲೂಕು

**ಪ್ರತಿವಾದಿ (ಶ್ರೀ/ಶ್ರೀಮತಿ)**

ಎಂ.ಜಿ. ರಾಮಣ್ಣ ತಂದೆ ಮರಿಗೋಣೆಪ್ಪ ವಾಸ ವರದಾಪುರ ಗ್ರಾಮ ಹಬೊ ಹಳ್ಳಿ ತಾಲೂಕು

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ವರದಾಪುರ | 158 & 179 | 5.75 & 0.92 ಎಕರೆ |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ವರದಾಪುರ ಗ್ರಾಮದ ಸ.ನಂ. 158 ಮತ್ತು 179 ವಿಸ್ತೀರ್ಣ ಕ್ರಮವಾಗಿ 5.75 ಮತ್ತು 0.92 ಎಕರೆ ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಪಾಲು ವಿಭಾಗ ಪತ್ರದ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್ 05/2014-15 ರಲ್ಲಿ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:29.10.2015 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನುಗಳು ಮೂಲತಃ ದಿ.ಹಾವಪ್ಪ ಇವರ ಮಕ್ಕಳಾದ ವಾದಿಗಳ ಜಮೀನುಗಳಾಗಿದ್ದು ಪಹಣಿ ಪತ್ರಿಕೆಯಲ್ಲಿ ವಾದಿಗಳ ಹೆಸರಿಗೆ ಜಂಟಿಯಾಗಿ ಖಾತೆ ಇದ್ದು 1 ಮತ್ತು 2ನೇ ವಾದಿಗಳು ಏಕಸ್ತರಾಗಿ ದಿನಾಂಕ:24.04.2015 ರಂದು ಮಾಡಿಕೊಂಡ ಪಾಲು ವಿಭಾಗದ ಪ್ರಕಾರ ಹಕ್ಕು ಬದಲಾವಣೆಗೆ ಮನವಿಯನ್ನು ಸಲ್ಲಿಸಿದ್ದು ಸದರಿ ಪಾಲು ವಿಭಾಗದಂತೆ ಖಾತೆ ಮಾಡಿಕೊಡುವಂತೆ ಕೋರಿರುತ್ತಾರೆ.

ಪ್ರತಿವಾದಿಗಳು ದಿನಾಂಕ:02.09.2015 ರಂದು ಪ್ರಶ್ನಿತ ಹಕ್ಕುಬದಲಾವಣೆಗೆ ಲಿಖಿತ ತಕರಾರನ್ನು ಸಲ್ಲಿಸಿ ವಿಚಾರಣೆಗೆ ಹಾಜರಾಗಿರುತ್ತಾರೆ, ಸದರಿಯವರ ಪ್ರಕಾರ ಪ್ರಸ್ತುತ ಜಮೀನುಗಳು-

- ವಾದಿ, ಪ್ರತಿವಾದಿಗಳ ಪಿತ್ರಾರ್ಜಿತ ಜಮೀನುಗಳಾಗಿದ್ದು, ಈ ಜಮೀನುಗಳ ಮೇಲೆ ತಮಗೂ ಹಕ್ಕು ಬಾದ್ಯತೆಗಳಿರುವುದಾಗಿ ತಿಳಿಸುತ್ತಾ, ಪ್ರಸ್ತುತ ಹಕ್ಕುಬದಲಾವಣೆಯನ್ನು ಮಾಡಬಾರದೆಂದು ಕೋರಿರುತ್ತಾರೆ.

ವಾದಿ ಹಾಗೂ ಪ್ರತಿವಾದಿಗಳು ಮಂಡಿಸಿದ ವಾದ ಮತ್ತು ಪ್ರತಿವಾದವನ್ನು ಆಲಿಸಲಾಗಿ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ವಾದಿ ಮತ್ತು ಪ್ರತಿವಾದಿಗಳು ರಕ್ತ ಸಂಬಂಧಿಗಳಾಗಿರುವುದಾಗಿ ಹಾಗೂ ಪ್ರಸ್ತುತ ವ್ಯಾಜ್ಯದ ಜಮೀನುಗಳು ಮೂಲತಃ ವಾದಿ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ ಹಾಗೂ ಪ್ರಸ್ತುತ ಪಾಲು ವಿಭಾಗ ದಸ್ತಾವೇಜು ಪತ್ರವು ನೊಂದಾಯಿತವಾಗಿಲ್ಲದ ಕಾರಣ ಸದರಿ ವಿವಾದಾಸ್ಪದ ದಸ್ತಾವೇಜಿನ ನೈಜತೆಯನ್ನು ತೀರ್ಮಾನಿಸಲು ಈ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದಿಲ್ಲವಾದ್ದರಿಂದ ಉಭಯ ಪಕ್ಷಕಾರರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿ ಆದೇಶಿಸುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ ಆದೇಶ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ವರದಾಪುರ ಗ್ರಾಮದ ಸ.ನಂ. 158 ಮತ್ತು 179 ವಿಸ್ತೀರ್ಣ ಕ್ರಮವಾಗಿ 5.75 ಮತ್ತು 0.92 ಎಕರೆ ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಉಭಯರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 05.05.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ನಾಗರಾಜ.ಹೆಚ್]
ಉಪತಹಶೀಲ್ದಾರರು,
ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.